**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ/ 266 /ಗ್ರಾಪಂಕಾ/2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 17-06-2014.

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

**ಇವರಿಗೆ:**

ಹಿರಿಯ ತಾಂತ್ರಿಕ ನಿರ್ದೇಶಕರು,
ಎನ್‌ಐಸಿ,
**ಬೆಂಗಳೂರು.**

ಮಾನ್ಯರೆ,

ವಿಷಯ: ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾಗಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಕಂಪ್ಯೂಟರೀಕೃತ ಕೌನ್ಸಿಲಿಂಗ್ ಮೂಲಕ ಗ್ರಾಮ ಪಂಚಾಯತಿಗಳಿಗೆ ನೇಮಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಲೋಕ ಸೇವಾ ಆಯೋಗವು 1750 ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗೆ ಆಯ್ಕೆ ಮಾಡಿ ಆಯ್ಕೆ ಪಟ್ಟಿಯನ್ನು ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿ, ನೇಮಕಾತಿ ಮಾಡಲು ಕ್ರಮವಹಿಸುವಂತೆ ನಿರ್ದೇಶನ ನೀಡಿರುತ್ತಾರೆ.

ಆದುದರಿಂದ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾಗಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಗೆ ಕಂಪ್ಯೂಟರೀಕೃತ ಕೌನ್ಸಿಲಿಂಗ್ ಮೂಲಕ ಗ್ರಾಮ ಪಂಚಾಯತಿಗಳಿಗೆ ನೇಮಿಸುವ ಬಗ್ಗೆ ಈ ಕೆಳಕಂಡ ಅಂಶಗಳನ್ನಾಧರಿಸಿ, ಕೂಡಲೆ ತಂತ್ರಾಂಶ ರಚಿಸುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

1. ಜಿಲ್ಲೆಗೆ ಹಂಚಿಕೆಯಾಗಿರುವ ಹುದ್ದೆಗಳಿಗಷ್ಟೆ ಒಂದೇ ಹಂತದಲ್ಲಿ ಅಥವಾ ಒಂದೇ ಗುಂಪಿನಲ್ಲಿ ಕೌನ್ಸಿಲಿಂಗ್ ಮೂಲಕ ಸ್ಥಳಗಳನ್ನು ಗುರುತಿಸುವಂತೆ ಅವಕಾಶ ಕಲ್ಪಿಸುವುದು.
2. ಮೊದಲು ಖಾಲಿ ಇರುವ ಗ್ರೇಡ್-1 ಗ್ರಾಮ ಪಂಚಾಯತಿಗಳಿಗೆ ಕಡ್ಡಾಯವಾಗಿ ಸ್ಥಳ ನಿಯುಕ್ತಿಗೊಳಿಸಲು **ಮೊದಲ ಆದ್ಯತೆ** ಕಲ್ಪಿಸುವುದು.
3. ನಂತರ ಗ್ರೇಡ್-2 ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯಲ್ಲಿ ಪ್ರಭಾರದಲ್ಲಿರುವ ಖಾಲಿ ಇರುವ ಗ್ರೇಡ್-2 ಗ್ರಾಮ ಪಂಚಾಯತಿಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಎರಡನೇ ಆದ್ಯತೆ ಕಲ್ಪಿಸುವುದು.
4. ಅಂಗವಿಕಲರಲ್ಲಿ (ಪುರಷ/ಮಹಿಳಾ) ಅಂಧ / ದೃಷ್ಠಿಮಾಂದ್ಯ ಅಭ್ಯರ್ಥಿಗಳಿಗೆ **ಮೊದಲ ಆದ್ಯತೆ** ನಂತರ ಶ್ರವಣದೋಷ, ಚಲನವೈಕಲ್ಯ ಅಭ್ಯರ್ಥಿಗಳಿಗೆ ಆದ್ಯತೆ ನೀಡತಕ್ಕದ್ದು.
5. ಮಹಿಳಾ ಅಭ್ಯರ್ಥಿಗಳಿಗೆ **2ನೇ ಆದ್ಯತೆ** ನೀಡತಕ್ಕದ್ದು.
6. ಮಾಜಿ ಸೈನಿಕ ಅಭ್ಯರ್ಥಿಗಳಿಗೆ **3ನೇ ಆದ್ಯತೆ** ನೀಡತಕ್ಕದ್ದು.
7. ಪುರಷ ಅಭ್ಯರ್ಥಿಗಳಿಗೆ **4ನೇ ಆದ್ಯತೆ** ನೀಡತಕ್ಕದ್ದು.

ತಮ್ಮ ವಿಶ್ವಾಸಿ,

17/6/14

(ಕೆ. ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.